ದಿನಾಂಕಃ 11.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃಪ್ರತಿವಾದಿಗಳ ಪರ ಶ್ರೀ ಆರ್.ಬಿ.ಎಚ್ ವಕೀಲರಿಂದಃ**

ಈಗ ಸುಮಾರು ವರ್ಷಗಳಿಂದ ನಮ್ಮ ತಂದೆ ಹಾಗೂ 1ನೇ ಪ್ರತಿವಾದಿಯವರು ಪರಿಚಯ ಇರುತ್ತಾರೆ. 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ನಮ್ಮ ತಂದೆಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಊರಲ್ಲಿ ಯಾರಾದರೂ ಜಮೀನು ಮಾರಾಟ ಮಾಡಬೇಕಾದರೆ ಸಾಮಾನ್ಯವಾಗಿ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತಾರಗಳನ್ನು ನಮ್ಮ ತಂದೆ ಪರಿಶೀಲನೆ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ನಮ್ಮ ತಂದೆಯವರು ಕಾನೂನು ಸಲಹೆ ಪಡೆದುಕೊಂಡಿರುತ್ತಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ಸನ್ 2017 ರಲ್ಲಿ ಆದ ಕ್ರಯದ ಕರಾರು ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸದರಿ ಕ್ರಯದ ಕರಾರ ಪತ್ರವನ್ನು ನೋಡಿರುತ್ತೇನೆ. ಸದರಿ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಗೊತ್ತಿರುತ್ತದೆಯಾ? ಎಂದರೆ ಸಾಕ್ಷಿಯು ದಾವಾ ಆಸ್ತಿಗಳ ಮೇಲೆ ಇದ್ದ ಸಾಲವನ್ನು ಮರುಪಾವತಿ ಮಾಡಿದ ನಂತರ ಖರೀದಿ ಪತ್ರ ಬರೆದುಕೊಡುವಂತೆ ಷರತ್ತುಗಳು ಇದ್ದವು ಎಂದು ನುಡಿಯುತ್ತಾರೆ. ದಾವೆಯನ್ನು ಹಾಕಲು ಮಾಹಿತಿಯನ್ನು ನಾವೆಲ್ಲರೂ ವಾದಿಯರು ಸೇರಿ ಕೊಟ್ಟಿರುತ್ತೇವೆ. ಸನ್ 2017 ರ ಕ್ರಯದ ಕರಾರ ಪತ್ರದ ಬಗ್ಗೆ ವಾದ ಪತ್ರದಲ್ಲಿ ಹೇಳಲು ತೊಂದರೆ ಇತ್ತಾ? ಎಂದರೆ ಸಾಕ್ಷಿಯು ಎಲ್ಲವೂ ಸೇರಿ ಸನ್ 2019 ರಲ್ಲಿ ಕ್ರಯದ ಕರಾರ ಪತ್ರ ಆಗಿದ್ದರಿಂದ ಆ ಬಗ್ಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ಸದರಿ ಸನ್ 2017 ರಲ್ಲಿ ಆದ ಕ್ರಯದ ಕರಾರ ಪತ್ರವನ್ನು ಯಾರು ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಇರಲಿಲ್ಲ. ಸದರಿ ಪತ್ರಕ್ಕೆ ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಗೊತ್ತಿಲ್ಲ.

ಪ್ರತಿವಾದಿಯರು ಮೊದಲು ದಾವಾ ಆಸ್ತಿಯನ್ನು ರೂ.6 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ನಂತರ ರೂ.16 ಲಕ್ಷ ಮೌಲ್ಯಕ್ಕೆ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದು, ಆ ಸಮಯದಲ್ಲಿ ಪ್ರತಿವಾದಿಯರ ವಿರುದ್ದ ದಾವೆಯನ್ನು ಹೂಡಲು ಏನೂ ತೊಂದರೆ ಇತ್ತು? ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯ ಮಕ್ಕಳು ತಕರಾರು ಮಾಡಿದ್ದರಿಂದ ಅವರೆಲ್ಲರನ್ನೂ ಸೇರಿಕೊಂಡು ಮತ್ತೊಂದು ಕರಾರ ಪತ್ರವನ್ನು ಸನ್ 2019 ರಲ್ಲಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸನ್ 2017 ರಲ್ಲಿ ಮಾಡಿಕೊಂಡ ಕ್ರಯದ ಕರಾರ ಪತ್ರಕ್ಕೆ ಪುರವಣಿ ಪತ್ರವನ್ನು ಬರೆದುಕೊಳ್ಳಲು ತೊಂದರೆ ಇತ್ತಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಎರಡು ಪತ್ರಗಳ ಬದಲಾಗಿ ಹೊಸ ಕ್ರಯದ ಕರಾರ ಪತ್ರ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ 2019 ರಲ್ಲಿ ಮಾಡಿಕೊಂಡ ಕ್ರಯದ ಕರಾರ ಪತ್ರ ಮಾಡಿಕೊಳ್ಳುವ ದಿನದಂದು ಉಪನೊಂದಣಿ ಅಧಿಕಾರಿ ಕಛೇರಿಗೆ ನಾವು ಬಂದ ನಿಖರವಾದ ಸಮಯವನ್ನು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿದಾರರನ್ನು ಪ್ರತಿವಾದಿಗಳೆ ಕರೆದುಕೊಂಡು ಬಂದಿದ್ದರು. ಸದರಿ ಕ್ರಯದ ಕರಾರ ಪತ್ರವನ್ನು ದಸ್ತುಬರಹಗಾರರು ತಯಾರಿಸಿರುತ್ತಾರೆ. ಸದರಿ ಪತ್ರವನ್ನು ಎಲ್ಲಿ ತಯಾರಿಸಿರುತ್ತಾರೆ ಎಂದರೆ ದಸ್ತುಬರಹಗಾರರ ಕಛೇರಿಯಲ್ಲಿ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಕ್ರಯದ ಕರಾರ ಪತ್ರ ಮಾಡಿಕೊಳ್ಳುವ ದಿನ 1ನೇ ಪ್ರತಿವಾದಿ ದಾವಾ ಆಸ್ತಿಯ ಪಹಣಿ ಪತ್ರಿಕೆ, ಆಧಾರ ಕಾರ್ಡ್ ಹಾಗೂ ಸದರಿ ಜಮೀನಿನ ಮೇಲೆ ಸಾಲ ಇದ್ದ ಬಗ್ಗೆ ದಾಖಲೆಗಳನ್ನು ತಂದಿದ್ದರು. ಸದರಿ ಪತ್ರ ನೊಂದಣಿ ಆಗುವ ದಿನ ನಾವು ಪ್ರತಿವಾದಿಯರಿಗೆ ಮೊದಲು ಕೊಟ್ಟ ರೂ.5 ಲಕ್ಷ ಗಳನ್ನು ಸೇರಿಕೊಂಡು ರೂ.15,31,000/- ಅಂದರೆ ಸದರಿ ದಿನ ರೂ.10,31,000/- ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇವೆ.

ಸದರಿ ಹಣವನ್ನು ನಮ್ಮ ತಂದೆಯವರು ಕೊಟ್ಟಿದ್ದು, ಸದರಿ ಹಣವನ್ನು ಎಲ್ಲಿಂದ ತಂದಿದ್ದರು ಎಂದು ನನಗೆ ಮಾಹಿತಿ ಇಲ್ಲ. ಸದರಿ ಹಣವನ್ನು ಉಪನೊಂದಣಿ ಅಧಿಕಾರಿಗಳ ಕಛೇರಿಯಲ್ಲಿ ಉಪನೊಂದಣಿ ಅಧಿಕಾರಿಗಳ ಸಮಕ್ಷಮ ಕೊಟ್ಟಿರುತ್ತೇವೆ. ಆ ಬಗ್ಗೆ ನಿಪಿ.5 ರಲ್ಲಿ ಉಪನೊಂದಣಿ ಅಧಿಕಾರಿಗಳ ಹಿಂಬರಹ ಇರುವುದಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ ಖಾತೆ ಮೂಲಕ ಹಣ ಕೊಡಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಈಗಾಗಲೇ ದಾವಾ ಸ್ವತ್ತಿನ ಮೇಲೆ ಸಾಲ ಇದ್ದು, ಒಂದು ವೇಳೆ ಬ್ಯಾಂಕ ಖಾತೆ ಮೂಲಕ ಕೊಟ್ಟರೆ ಸದರಿ ಹಣ ಬ್ಯಾಂಕಿನವರು ಸಾಲದ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂದು ನಗದು ರೂಪದಲ್ಲಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಸದರಿ ಹಣವನ್ನು ನಗದು ರೂಪದಲ್ಲಿ ಕೊಡಲು ಹೇಳಿದ್ದರಿಂದ ನಾವು ನಗದು ರೂಪದಲ್ಲಿ ಕೊಟ್ಟಿರುತ್ತೇವೆ.

ಸದರಿ ದಿನ ನಮ್ಮ ತಂದೆಯವರು ರೂ.10,31,000/- ಹಣ ಹೊಂದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿಲ್ಲ ಎಂದರೆ ನಿಜ. ಆ ಬಗ್ಗೆ ದಾಖಲೆಯನ್ನು ಹಾಜರಪಡಿಸಲು ತೊಂದರೆ ಇಲ್ಲ. ನನ್ನ ತಂದೆ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯ ಅಗತ್ಯ ಪಡಿಸಿದರೆ ಹಾಜರಪಡಿಸುತ್ತೇನೆ. ಪ್ರತಿವಾದಿಯರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನೋಡಿದರೆ ಗುರುತಿಸುತ್ತೀರಾ? ಎಂದರೆ ಸಾಕ್ಷಿಯು ಸನ್ 2019 ರಲ್ಲಿ ನೋಡಿದ್ದು ನನಗೆ ಅಷ್ಟೊಂದು ಗುರುತಿಸಲು ಆಗುವುದಿಲ್ಲ ಎಂದು ನುಡಿದು, ಆದರೆ 1ನೇ ಪ್ರತಿವಾದಿ-ವಿಠ್ಠಲನನ್ನು ನೋಡಿ ಗುರುತಿಸುತ್ತಾರೆ. 2 ರಿಂದ 4ನೇ ಪ್ರತಿವಾದಿಯರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನಾನು ಇದೇ ಮೊದಲಭಾರಿಗೆ ನೋಡಿದ್ದು, ಆದ್ದರಿಂದ ಅವರನ್ನು ನೋಡಿ ಗುರುತಿಸಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

ನಿಪಿ.5 ಕ್ಕೆ 2 ರಿಂದ 4ನೇ ಪ್ರತಿವಾದಿಯರನ್ನು ಒಪ್ಪಿಗೆ ಸಾಕ್ಷಿದಾರರನ್ನಾಗಿ ಮಾಡಿ ಅವರ ಪೋಟೋ ತೆಗೆಸಲು ತೊಂದರೆ ಇತ್ತಾ? ಎಂದರೆ ಸಾಕ್ಷಿಯು ದಾವಾ ಆಸ್ತಿಯು 1ನೇ ಪ್ರತಿವಾದಿಯ ಹೆಸರಿಗೆ ಇದ್ದು, ಆತನ ಪೋಟೋ ಮಾತ್ರ ತೆಗೆದಿದ್ದು ಉಳಿದವರು ಸಾಕ್ಷಿಯಾಗಿ ಮಾತ್ರ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ 2 ರಿಂದ 4ನೇ ಪ್ರತಿವಾದಿಯರು ಉಪನೊಂದಣಿ ಕಛೇರಿಗೆ ಬಂದಿರಲಿಲ್ಲ, ನಮ್ಮ ತಂದೆಯವರು ಅವರ ಸಹಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ 7ನೇ ತರಗತಿವರೆಗೆ ಓದಿದ್ದರೂ ಸಹ ಅವರಿಗೆ ಓದಲು, ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ತಂದೆಯವರು ಸನ್ 2017 ರಲ್ಲಿ ಕ್ರಯದ ಕರಾರ ಪತ್ರವನ್ನು ರದ್ದತಿ ಮಾಡುತ್ತೇನೆಂದು ಹೇಳಿ ನಿಪಿ.5 ರಂತೆ ಹೊಸದ ಕ್ರಯದ ಕರಾರ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರು ಪ್ರತಿವಾದಿಯರಿಗೆ ಖರೀದಿ ಪತ್ರವನ್ನು ಬರೆದುಕೊಡುವಂತೆ ಯಾವಾಗ ಸಂಪರ್ಕಿಸಿರುತ್ತಾರೆ ಎಂದರೆ ಸನ್ 2021 ಕ್ಕಿಂತ ಮುಂಚೆ ಹಾಗೂ ನಂತರದಲ್ಲಿ ಸಹ ಕೇಳುತ್ತಾ ಬಂದಿದ್ದು, ಆದರೆ ಪ್ರತಿವಾದಿಯರು ದಿನ ಮುಂದುಡುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನದಂದು ಸಂಪರ್ಕಿಸಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ನಿಪಿ.5 ರಲ್ಲಿ ಎಲ್ಲಾ ಮಾಲೀಕರ ಸಹಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.5 ರಂತೆ ಪ್ರತಿವಾದಿಯರು ಯಾವುದೇ ಕ್ರಯದ ಕರಾರ ಪತ್ರ ಬರೆದುಕೊಟ್ಟಿರದೇ ಇದ್ದರೂ ಸಹ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸನ್ 2019 ನಾವು ಹೇಳಿದಂತೆ ಪ್ರತಿವಾದಿಯರಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ